**ದಿಃ 07-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1) ನಾನು ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಸಲ್ಲಿಸಿದ ಆರ್ ಟಿ ಎಸ್ ಮೇಲ್ಮನವಿಯಲ್ಲಿ ಈ ದಾವೆಯ ವಾದಿಯರು ಸೋಲುತ್ತಾರೆ ಎನ್ನುವ ಕಾರಣಕ್ಕಾಗಿ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದು ಪ್ರತಿವಾದ ಪತ್ರದಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಸಂಗತಿಗಳು ನನಗೆ ಗೊತ್ತಿರುವುದಿಲ್ಲ. ನಾನು ಸಲ್ಲಿಸಿದ ಆರ್ ಟಿ ಎಸ್ ಮೇಲ್ಮನವಿಯನ್ನು ಮಾನ್ಯ ಉಪವಿಭಾಗಾಧಿಕಾರಿಗಳು ವಜಾಗೊಳಿಸಿರುತ್ತಾರೆ ಎಂದರೆ ಸರಿ. ಸದರಿ ಆದೇಶವನ್ನು ಪ್ರಶ್ನಿಸಿ ನಾನು ಮಾನ್ಯ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಸಲ್ಲಿಸಿರುವ ಮೇಲ್ಮನವಿಯನ್ನು ಸಹ ವಜಾಗೊಳಿಸಿರುತ್ತಾರೆ ಎಂದರೆ ಸರಿ.

2) ದಾವಾ ಸ್ವತ್ತುಗಳ ಪಹಣಿ ಪತ್ರಿಕೆಯಲ್ಲಿರುವ ನನ್ನ ತಂದೆಯ ಹೆಸರನ್ನು ಕಡಿಮೆ ಮಾಡಿಕೊಂಡು ವಾದಿಯರ ತಂದೆ 1984 ರಲ್ಲಿ ತನ್ನ ಹೆಸರನ್ನು ಹಚ್ಚಿ ಕೊಂಡಿರುತ್ತಾನೆ. ನನ್ನ ತಂದೆ ಮೃತನಾದ ನಂತರ 1984 ರಿಂದ 2015-2016 ರ ವರೆಗೆ ವಾರಸಾ ನಾತೆಯಿಂದ ನಮ್ಮ ಹೆಸರು ಸೇರಿಸಲು ಯಾವುದೇ ಅರ್ಜಿ ನೀಡಿರಲಿಲ್ಲ ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರೆದು 2015-2016 ರಲ್ಲಿ ನಾವು ವಾರಸಾ ಮಾಡಿಕೊಳ್ಳಲು ಅರ್ಜಿ ನೀಡಿದ್ದೇವು ಎಂದು ನುಡಿಯುತ್ತಾರೆ.

3) ದಿಃ12-04-1973 ರಂದು ನನ್ನ ತಂದೆ ವಾದಿಯರ ತಂದೆಗೆ ಮಾಡಿಕೊಟ್ಟ ಕ್ರಯ ಕರಾರು ಪತ್ರ ಖೊಟ್ಟಿಯಾಗಿರುತ್ತದೆ ಎಂದು ನಾವು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರೆದು ನನ್ನ ತಂದೆ ಅಂತಹ ಕ್ರಯ ಕರಾರು ಪತ್ರವನ್ನು ಮಾಡಿಕೊಟ್ಟಿರುವುದಿಲ್ಲ ಹೀಗಾಗಿ ಪ್ರಶ್ನೆ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ನಾವು ಹಾಗೂ ವಾದಿಯರು ಅಣ್ಣ ತಮ್ಮಂದಿರರ ತರಹ ಇದ್ದು ಇಂತಹ ದಾಖಲೆಯನ್ನು ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲದ ಕಾರಣ ನಾನು ಪ್ರಶ್ನೆ ಮಾಡಿಲ್ಲಾ.

4) ನನ್ನ ತಂದೆ ಶಾಲೆ ಕಲಿತಿರಲಿಲ್ಲ ಎಂದರೆ ಸರಿ. ನನ್ನ ತಂದೆ ಹೆಬ್ಬೆರಳಿನ ಸಹಿ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆಯ ಮುಗ್ದತೆಯನ್ನು ದುರುಪಯೋಗಪಡಿಸಿಕೊಂಡು ವಾದಿಯರ ತಂದೆ ಕ್ರಯ ಕರಾರು ಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತಾನೆ ಎಂದು ನನ್ನ ಪ್ರತಿವಾದ ಪತ್ರದಲ್ಲಿ ತಿಳಿಸಿರುತ್ತೇನೆ ಎಂದರೆ ಸರಿ. ಹಾಗೆ ಕ್ರಯ ಕರಾರು ಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದರ ವಿರುದ್ಧ ನಾನು ವಾದಿಯರ ವಿರುದ್ದ ಇಲ್ಲಿಯವರೆಗೆ ಪೋಲಿಸ ಠಾಣೆಗೆ ಹೋಗಿ ದೂರು ನೀಡಿರುವುದಿಲ್ಲ ಎಂದರೆ ಸರಿ. ನನ್ನ ತಂದೆ ವಾದಿಯರ ತಂದೆಗೆ ಕ್ರಯ ಕರಾರು ಪತ್ರ ಮಾಡಿಕೊಟ್ಟು ಸ್ವಾಧೀನತೆಯನ್ನು ನೀಡಿದ್ದು ನನಗೆ ಗೊತ್ತಿರುವುದರಿಂದ ನಾನು ಯಾವುದೇ ಕಾನೂನು ಕ್ರಮ ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ತನ್ನ ಕಾನೂನು ಬದ್ಧ ಅವಶ್ಯಕತೆಗಳಿಗಾಗಿ ದಾವಾ ಸ್ವತ್ತನ್ನು ವಾದಿಯರ ತಂದೆಗೆ ಮಾರಾಟ ಮಾಡಲು ಒಪ್ಪಿ

ಕೊಂಡು ಕ್ರಯ ಕರಾರು ಪತ್ರವನ್ನು ಮಾಡಿಕೊಟ್ಟು ದಾವಾ ಸ್ವತ್ತುಗಳ ಸ್ವಾಧೀನತೆಯನ್ನು ಸಹ ವಾದಿಯರ ತಂದೆಗೆ ನೀಡಿದ್ದಾ ಎಂದರೆ ಸರಿಯಲ್ಲ. ಸದರಿ ಎಲ್ಲ ಸಂಗತಿಗಳು ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಜೀವಂತ ಇರುವ ವರೆಗೆ ವಾದಿಯರು ನನ್ನ ತಂದೆಗೆ ಭೇಟಿಯಾಗಿ ಉಳಿದ ರೂ.100/- ಹಣವನ್ನು ಪಡೆದುಕೊಂಡು ಶುದ್ಧ ಕ್ರಯ ಪತ್ರ ಮಾಡಿಕೊಡಲು ಕೇಳಿಕೊಂಡಿದ್ದರೂ ಸಹ ದಾವಾ ಸ್ವತ್ತುಗಳ ರೈತಾವಾ ಆಗದೆ ಇರುವ ಕಾರಣ ನನ್ನ ತಂದೆ ದಾವಾ ಸ್ವತ್ತುಗಳ ಶುದ್ಧ ಕ್ರಯ ಪತ್ರವನ್ನು ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

5) 1979 ರಲ್ಲಿ ನನ್ನ ತಂದೆ ಮೃತನಾಗಿರುತ್ತಾನೆ ಎಂದರೆ ಸರಿ. ನನ್ನ ತಂದೆ ಜೀವಂತ ಇದ್ದಾಗ ವಾದಿಯರ ತಂದೆ ಅನೇಕ ಸಲ ನನ್ನ ತಂದೆಗೆ ಬೇಟಿಯಾಗಿ ಶುದ್ಧ ಕ್ರಯ ಪತ್ರ ಮಾಡಿಕೊಡಲು ಕೋರಿಕೊಂಡಿದ್ದರು ಎಂದರೆ ಸರಿಯಲ್ಲ. 1979 ರಲ್ಲಿ ನನ್ನ ತಂದೆ ಮೃತನಾದ ನಂತರ ವಾದಿಯರ ತಂದೆ ಮೃತ ಸಣ್ಣರಾಮಪ್ಪಾ ರವರಿಗೆ ತಾನೇ ಹತ್ತಿರದ ಸಂಬಂಧಿಕನಾಗಿದ್ದರಿಂದ ತನ್ನ ಹೆಸರನ್ನು ಮೃತ ಸಣ್ಣರಾಮಪ್ಪಾ ರವರಿಗೆ ಒಂದನೇ ವರ್ಗದ ವಾರಸುದಾರರು ಇಲ್ಲದ ಕಾರಣ ದಾವಾಸ್ವತ್ತುಗಳಿಗೆ ವಾದಿಯರ ತಂದೆ ಹೆಸರು ದಾಖಲಿಸಿಕೊಂಡಿದ್ದಾ ಎಂದರೆ ಸಾಕ್ಷಿಯು ಖೊಟ್ಟಿಯಾಗಿ ದಾಖಲಿಸಿಕೊಂಡಿದ್ದಾ ಎಂದು ನುಡಿಯುತ್ತಾರೆ.

6) ದಾವಾ ಸ್ವತ್ತಿನ ಕುರಿತು 1973 ರಲ್ಲಿ ಆದ ಕ್ರಯ ಕರಾರು ಪತ್ರದನ್ವಯ ವಾದಿಯರ ತಂದೆ ಜೀವಂತ ಇರುವವರೆಗೆ ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ವಾದಿಯರ ತಂದೆ ಇದ್ದಾ ಎಂದರೆ ಸರಿಯಲ್ಲ . ವಾದಿಯರ ತಂದೆ ಮೃತನಾದ ನಂತರ ಇಲ್ಲಿಯವರೆಗೆ ದಾವಾ ಸ್ವತ್ತುಗಳ ಸ್ವಾಧೀನಾನುಭವದಲ್ಲಿ ವಾದಿಯರು ಇರುತ್ತಾರೆ ಎಂದರೆ ಸರಿಯಲ್ಲ. ಮೃತ ಸಣ್ಣರಾಮಪ್ಪಾ ರವರಿಗೆ ಸೇರಿದ ದಾವಾ ಸ್ವತ್ತುಗಳನ್ನು ಎತ್ತಿಹಾಕಿಕೊಳ್ಳಬೇಕು ಎನ್ನು ವ ಉದ್ದೇಶದಿಂದ ವಾದಿಯರ ತಂದೆಗೆ ನನ್ನ ತಂದೆ ದಾವಾ ಸ್ವತ್ತುಗಳ ಕುರಿತು ಕ್ರಯ ಕರಾರು ಪತ್ರ ಮಾಡಿಕೊಟ್ಟಿರುವುದಿಲ್ಲ ಎಂದು ಪ್ರತಿವಾದ ಪತದಲ್ಲಿ ಹಾಗೂ ನನ್ನ ಮುಖ್ಯ ವಿಚಾರಣೆಯ ಬದಲಾಗಿ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಸುಳ್ಳು ಪ್ರತಿರಕ್ಷೆ ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

7) ನಾನು ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಮೃತ ಸಣ್ಣರಾಮಪ್ಪನ ಮಗನಾಗಿರುತ್ತೇನೆ ಎಂದು ತಿಳಿಸಿರುವುದರಿಂದ ಮೃತ ಸಣ್ಣರಾಮಪ್ಪಾ ರವರು ಮಾಡಿಕೊಟ್ಟ ಕ್ರಯ ಕರಾರು ಪತ್ರದನ್ವಯ ಶುದ್ಧ ಕ್ರಯ ಪತ್ರವನ್ನು ವಾದಿಯರಿಗೆ ಮಾಡಿಕೊಡುವ ಭಾಧ್ಯಸ್ಥಿಕೆ ಹೊಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಣ್ಣ ರಾಮಪ್ಪಾ ರವರ ಮಗನಾಗಿರುತ್ತೇನೆ ಎಂದು ಸದರಿ ಆರ್ ಟಿ ಎಸ್ ಮೇಲ್ಮನವಿಯಲ್ಲಿ ತೆಗೆದುಕೊಂಡ ಪ್ರತಿರಕ್ಷೆ ವಾದಿಯರಿಗೆ ಗೊತ್ತಾದ ನಂತರ ವಾದಿಯರು ತಮ್ಮ ವಕೀಲರ ಮೂಲಕ ನನಗೆ ನೋಟಿಸು ಕಳುಹಿಸಿ ಉಳಿದ ರೂ. 100/- ಸ್ವೀಕಾರ ಮಾಡಿಕೊಂಡು ಶುದ್ಧ ಕ್ರಯ ಪತ್ರ ಮಾಡಿಕೊಡಲು ತಿಳಿಸಿದ್ದರು ಎಂದರೆ ಸರಿ. ನಾನು ಸದರಿ

ನೋಟಿಸಿನನ್ವಯ ವಾದಿಯರ ಕಡೆಯಿಂದ ಉಳಿದ ರೂ. 100/- ಸ್ವೀಕಾರ ಮಾಡಿಕೊಂಡು ಶುದ್ಧ ಕ್ರಯ ಪತ್ರ ಮಾಡಿಕೊಡದ ಕಾರಣ ವಾದಿಯರು ಈ ಸಲ್ಲಿಸಿರುತ್ತಾರೆ ಎಂದರೆ ಸರಿ. ವಾದಿಯರಿಗೆ ದಾವಾ ಸ್ವತ್ತಿನ ಕುರಿತು ಉಳಿದ ಹಣ ಸ್ವೀಕರಿಸಿಕೊಂಡು ಶುದ್ಧ ಕ್ರಯ ಪತ್ರವನ್ನು ಮಾಡಿಕೊಡದೆ ಸುಳ್ಳು ಪ್ರತಿವಾದ ಪತ್ರ ಹಾಗೂ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.